**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿಯವರ ನ್ಯಾಯಾಲಯ ಪೊನ್ನಂಪೇಟೆ.**

**ಕ್ರಿ.ಮೊ.ಸಂಖ್ಯೆ:2/2024**

ಪಿರ್ಯಾದಿ : ಶ್ರೀ ಜೆ.ಕೆ.ಮನಮೋಹನ್,
ತಂದೆಃ ಪೌತಿ ಜೆ.ಎ.ಕುಟ್ಟಪ್ಪ,
ಪ್ರಾಯ 64 ವರ್ಷ
ವಾಸಃ ಕುಂದ ಗ್ರಾಮ ಮತ್ತು ಅಂಚೆ
ಪೊನ್ನಂಪೇಟೆ ತಾಲ್ಲುಕು, ಎಸ್.ಕೊಡಗು.

**ವಿರುದ್ಧ**

ಆರೋಪಿ : ಶ್ರೀಮತಿ ಸೌಮ್ಯ,
ಗಂಡಃ ರಾಜು, ತಂದೆಃ ಪುಟ್ಟಸ್ವಾಮಿ,
ಪ್ರಾಯಃ 45 ವರ್ಷ,
ವಾಸಃ ಆಶ್ರಯ ಫ್ಯಾಶನ್ಸ್,
ಶ್ರೀ ರಾಮಮಂದಿರದ ಹತ್ತಿರ,
ಎಸ್.ಜೆ.ರೋಡ್, ಹುಣಸೂರು 571 105.

**ದಂಡ ಸಂಹಿತೆ ಪ್ರಕ್ರಿಯೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ**

**ಪ್ರಶ್ನೆ ಸಂಖ್ಯೆ-1:** ಪಿರ್ಯಾದಿಯ ಪರ ಇದುವರೆಗೂ ನುಡಿದ ಎಲ್ಲಾ ಸಾಕ್ಷ್ಯಗಳನ್ನು ಆಲಿಸಿದ್ದೀರಾ?

ಉಃ ಹೌದು

**ಪ್ರಶ್ನೆ ಸಂಖ್ಯೆ-2:** ಪ್ರಾ.ಸಾಃ1 ಶ್ರೀ ಜೆ.ಕೆ.ಮನಮೋಹನ್, ಪಿರ್ಯಾದುದಾರರು ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ಆರೋಪಿಯಾದ ನೀವು ಅವರಿಗೆ ಪರಿಚಯಸ್ಥರಾಗಿದ್ದು, ತಮ್ಮ ಆರ್ಥಿಕ ಅಗತ್ಯತೆಗಾಗಿ ಅವರ ಬಳಿ ದಿಃ04.09.2023 ರಂದು ರೂ.4,50,000/- ರೂಪಾಯಿಗಳನ್ನು ಮೇಕೆ ಸಾಕಾಣಿಕೆಗಾಗಿ ಸಾಲವಾಗಿ ಪಡೆದಿದ್ದು, ನಂತರ ಪಿರ್ಯಾದಿಯವರು ಹಣವನ್ನು ಮರುಪಾವತಿಸುವಂತೆ ಕೇಳಿದಾಗ ಆರೋಪಿಯಾದ ನೀವು ದಿಃ10.10.2023 ರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹುಣಸೂರು ಶಾಖೆಯ ನಿಮ್ಮ ಖಾತೆಯ 034174 ನಂಬರಿನ ಚೆಕ್ ಅನ್ನು ಸಾಲದ ಭಾಧ್ಯತೆಗಾಗಿ ನೀಡಿದ್ದು, ನಂತರ ಪಿರ್ಯಾದಿಯವರು ಸದರಿ ಚೆಕ್ ಅನ್ನು ನಗದೀಕರಣಕ್ಕಾಗಿ ತಮ್ಮ ಬ್ಯಾಂಕ್ ಆದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಪೊನ್ನಂಪೇಟೆ ಶಾಖೆಗೆ ಹಾಜರುಪಡಿಸಿದ್ದು, ಅವರು ದಿಃ12.10.2023 ರಂದು ಆರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಹಿಂಬರಹವನ್ನು ನೀಡಿರುತ್ತಾರೆ. ನಂತರ ಪಿರ್ಯಾದಿಯವರು ತಮ್ಮ ವಕೀಲರ ಮೂಲಕ ದಿಃ09.11.2023 ಮತ್ತು 27.11.2023 ರಂದು 15 ದಿನಗಳೊಳಗೆ ಚೆಕ್ ನ ಹಣವನ್ನು ಹಿಂತಿರುಗಿಸುವಂತೆ ಕಾನೂನು ರೀತಿಯಲ್ಲಿ ನೋಟೀಸನ್ನು ನೀಡಿದ್ದರೂ ಸಹ ಆರೋಪಿಯಾದ ನೀವು ಚೆಕ್‌ನ ಹಣವನ್ನು ಹಿಂಡಿರುಗಿಸದೇ ಇರುವ ಕಾರಣ ಅವರು ನಿಮ್ಮ ವಿರುದ್ಧ ದೂರನ್ನು ನೀಡಿ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಮತ್ತು ಸಾಕ್ಷಿಯು ನಿ.ಪಿ.1 ಚೆಕ್ಕನ್ನು, ನಿ.ಪಿ.2

ಬ್ಯಾಂಕ್ ಹಿಂಬರಹವನ್ನು, ನಿ.ಪಿ.3 ವಕೀಲರ ಮೂಲಕ ನೀಡಿದ ನೋಟೀಸನ್ನು, ನಿ.ಪಿ.4 ಮತ್ತು 7 ಅಂಚೆ ರಶೀತಿಯನ್ನು, ನಿ.ಪಿ.5 ಮತ್ತು 8 ಅಂಚೆ ಸ್ವೀಕೃತಿಯನ್ನು ಮತ್ತು ನಿ.ಪಿ.9 ಪ್ರಸ್ಯುತ್ತರ ಸೂಚನೆಯನ್ನು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

**ಪ್ರಶ್ನೆ ಸಂಖ್ಯೆ-3:** ಈ ಪ್ರಕರಣದಲ್ಲಿ ನಿಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ಅಥವಾ ದಾಖಲಾತಿ ಹಾಜರುಪಡಿಸಲು ಬಯಸುವಿರಾ?

ಉತ್ತರಃ ಇಲ್ಲ

**ಪ್ರಶ್ನೆ ಸಂಖ್ಯೆ-4** ಈ ಪ್ರಕರಣದಲ್ಲಿ ನೀವೇನಾದರೂ ಹೇಳಬಯಸುವಿರಾ?

ಉತ್ತರಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆತನು ನೀಡಿದ ಉತ್ತರಗಳನ್ನು ದಿಃ21.11.2025 ರಂದು ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು)

ಸ್ಥಳಃ ಪೊನ್ನಂಪೇಟೆ,<br>ದಿನಾಂಕಃ 21.11.2025

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,<br>ಪೊನ್ನಂಪೇಟೆ.

On perusal of records, the accused alleged to have committed offences P/U/Sec.138 of N.I Act. The above alleged offence against accused is bailable in nature and the same is triable by this court. Insufficient Funds and Dormant Account